Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣುಕು

## 29-11-2020



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಜಯಕಿರಣ
11. ಸಂಜೆ ವಾಣಿ
12. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 29-11-2020 |
| --- | --- |
| Page No | 3 |

# ಕೋವಿಡ್: 8.46 ಲಕ್ಷ ಮಂದಿ ಗುಣಮುಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 1,429 ಮಂದಿ ಸೇರಿದಂತೆ ರಾಜ್ಯದಲ್ಲಿ 2,133 ಮಂದಿಗೆ ಕಾಯಿಲೆ ವಾಸಿಯಾಗಿದೆ. ಇದರಿಂದಾಗಿ ಗುಣಮುಖರ ಸಂಖ್ಯೆ 8.46 ಲಕ್ಷಕ್ಕೆ ತಲುಪಿದೆ.

ರಾಜ್ಯದಲ್ಲಿ ಶನಿವಾರ 1,522 ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಸೋಂಕಿಗೀಡಾದವರ ಒಟ್ಟು ಸಂಖ್ಯೆ 8.82 ಲಕ್ಷಕ್ಕೆ ಏರಿಕೆಯಾಗಿದೆ. ಈ ತಿಂಗಳು 28 ದಿನಗಳ ಅವಧಿಯಲ್ಲಿ 59,196 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಈ ಅವಧಿಯಲ್ಲಿ ಪ್ರತಿನಿತ್ಯ ಸರಾಸರಿ 2,114 ಮಂದಿ ಸೋಂಕಿತರಾಗಿದ್ದಾರೆ. ಕೋವಿಡ್ ಪೀಡಿತರಲ್ಲಿ ಮತ್ತೆ 12 ಮಂದಿ ಮೃತಪಟ್ಟಿದ್ದು, ಈವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 11,750ಕ್ಕೆ ಏರಿಕೆಯಾಗಿದೆ.

ಕೊರೊನಾ ಸೋಂಕಿತರಲ್ಲಿ ಸದ್ಯ 24,757 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಇವರಲ್ಲಿ 384 ಮಂದಿ ತೀವ್ರ ನಿಗಾ ಘಟಕದಲ್ಲಿದ್ದಾರೆ. ಒಂದೇ ದಿನ 1.10 ಲಕ್ಷ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಈವರೆಗೆ 1.09 ಕೋಟಿ ಮಂದಿ ಕೋವಿಡ್ ಪರೀಕ್ಷೆಯನ್ನು ಮಾಡಿಸಿಕೊಂಡಿದ್ದಾರೆ. ರಾಜ್ಯದ ಜ್ವರ ಚಿಕಿತ್ಸಾಲಯಗಳಲ್ಲಿ 31 ಲಕ್ಷ ಮಂದಿಯನ್ನು ತಪಾಸಣೆ ಮಾಡಲಾಗಿದೆ.

ಬೆಂಗಳೂರಿನಲ್ಲಿ 719 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 3.68 ಲಕ್ಷ ದಾಟಿದೆ. ಮೈಸೂರಿನಲ್ಲಿ ಹೊಸದಾಗಿ 77 ಪ್ರಕರಣಗಳು ಪತ್ತೆಯಾಗಿವೆ. ಅಲ್ಲಿ ಒಟ್ಟು ಸೋಂಕಿತರ ಸಂಖ್ಯೆ 50,600ಕ್ಕೆ ತಲುಪಿದೆ. ತುಮಕೂರು (72), ದಕ್ಷಿಣ ಕನ್ನಡ (61) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ವರದಿಯಾಗಿವೆ.



ಕನ್ನಡಪ್ರಭ

| Date | 29-11-2020 |
| --- | --- |
| Page No | 2 |




## ವಾಹನ ರಹಿತ ಚರ್ಚ್ ಸ್ಟ್ರೀಟ್

ನಗರದ ಪ್ರಮುಖ ವಾಣಿಜ್ಯ ರಸ್ತೆಯಾದ ಚರ್ಚ್ ಸ್ಟ್ರೀಟ್‌ನಲ್ಲಿ ಶನಿವಾರ ವಾಹನ ಮುಕ್ತ ರಸ್ತೆಯನ್ನಾಗಿ ಮಾಡಲಾಗಿತ್ತು. ಇದರಿಂದಾಗಿ ಸಾರ್ವಜನಿಕರು ನಿರಾಳವಾಗಿ ಚರ್ಚ್ ಸ್ಟ್ರೀಟ್‌ನಲ್ಲಿ ಓಡಾಟ ನಡೆಸಿ, ಖುಷಿ ಪಟ್ಟರು.

ಕನ್ನಡಪ್ರಭ

| Date | 29-11-2020 |
|---|---|
| Page No | 3 |


# ಬಡವರಿಗೆ ಶೇ.50 ಕಸ ಶುಲ್ಕ ರಿಯಾಯಿತಿ

## ಜನವರಿಯಿಂದ ಘನತ್ಯಾಜ್ಯ ಶುಲ್ಕ ಜಾರಿ | ಮಾಸಿಕ ₹200ಗಿಂತ ಕಡಿಮೆ ವಿದ್ಯುತ್ ಬಿಲ್ ಕಟ್ಟುವವರಿಗೆ ₹100 ಕಸ ಶುಲ್ಕ

• **ವಿಶ್ವನಾಥ ಮಲೇಬೆನ್ನೂರು**
**ಕನ್ನಡಪ್ರಭ ವಾರ್ತೆ** ಬೆಂಗಳೂರು

ಬರುವ ಜನವರಿಯಿಂದ ಮಾಸಿಕ ₹200 ಘನತ್ಯಾಜ್ಯ ಸೇವಾ ಶುಲ್ಕವನ್ನು ಬೆಸ್ಕಾಂ ಬಿಲ್‌ನೊಂದಿಗೆ ವಸೂಲಿ ಸಿದ್ಧತೆ ಮಾಡಿಕೊಳ್ಳುತ್ತಿರುವ ಬಿಬಿಎಂಪಿ, ಮಾಸಿಕ ₹200 ಗಿಂತ ಕಡಿಮೆ ವಿದ್ಯುತ್ ಬಿಲ್ ಪಾವತಿದಾರರಿಗೆ ಶೇಕಡ 50ರಷ್ಟು ಶುಲ್ಕ ರಿಯಾಯಿತಿ ನೀಡಲು ತೀರ್ಮಾನಿಸಿದೆ.

ಈಗಾಗಲೇ ವಿದ್ಯುತ್ ದರ ಏರಿಕೆಯಿಂದ ಬಳಲುತ್ತಿರುವ ನಗರದ ನಾಗರಿಕರು ಸೇರಿದಂತೆ ತ್ಯಾಜ್ಯ ಉತ್ಪಾದಕರರಾದ ಹೋಟೆಲ್, ಕಲ್ಯಾಣ ಮಂಟಪ, ಆಸ್ಪತ್ರೆ, ಶಾಪಿಂಗ್ ಮಾಲ್‌ಗಳಿಂದ ಹೊಸ ವರ್ಷದಿಂದ (ಜನವರಿ) ಕಸ ಸಂಗ್ರಹಕ್ಕಾಗಿ ಪ್ರತಿ ತಿಂಗಳು ಘನತ್ಯಾಜ್ಯ ಸೇವಾ ಶುಲ್ಕ ವಿಧಿಸಲಿದೆ. ಬಿಬಿಎಂಪಿಯ ಕಸ ನಿರ್ವಹಣೆ ಉಪ ನಿಯಮ-2020ರ ಅನ್ವಯ ವಸತಿ ಕಟ್ಟಡಗಳಿಂದ ಗರಿಷ್ಠ ₹200 ಹಾಗೂ ವಾಣಿಜ್ಯ ಬಳಕೆದಾರರಿಂದ ₹500 ಶುಲ್ಕ ಸಂಗ್ರಹಿಸಲು ತೀರ್ಮಾನಿಸಿದೆ.

ಬಡವರಿಗೆ ಹಾಗೂ ಮಧ್ಯಮ ವರ್ಗದವರಿಗೆ ಹೊರೆಯಾಗಬಾರದೆಂಬ ಕಾರಣಕ್ಕೆ ಮಾಸಿಕ ₹200 ಗಿಂತ ವಿದ್ಯುತ್ ಬಿಲ್ ಪಾವತಿದಾರರಿಗೆ ₹100 ಮಾತ್ರ ಶುಲ್ಕ ವಿಧಿಸಲು ತೀರ್ಮಾನಿಸಲಾಗಿದೆ. ಮಾಸಿಕ ₹500 ಗಿಂತ ಹೆಚ್ಚಿನ ವಿದ್ಯುತ್ ಬಿಲ್ ಪಾವತಿದಾರರಿಗೆ ₹200 ಶುಲ್ಕ ವಿಧಿಸುವುದು ಅಂತಿಮಗೊಂಡಿದೆ. ಮಾಸಿಕ ₹200-500 ಒಳಗೆ ವಿದ್ಯುತ್ ಬಿಲ್ ಪಾವತಿದಾರರಿಗೆ ಎಷ್ಟು ರಿಯಾಯಿತಿ ನೀಡಬೇಕೆಂಬ ಬಗ್ಗೆ ಚರ್ಚೆ ನಡೆಯುತ್ತಿದೆ. ಆದರೆ ವಾಣಿಜ್ಯ ವಿದ್ಯುತ್ ಬಳಕೆದಾರರಿಗೆ ಯಾವುದೇ ರಿಯಾಯಿತಿ ಇರುವುದಿಲ್ಲ ಎಂದು ಬಿಬಿಎಂಪಿ ಅಧಿಕಾರಿಗಳು 'ಕನ್ನಡಪ್ರಭ'ಕ್ಕೆ ಮಾಹಿತಿ ನೀಡಿದ್ದಾರೆ.

**ಖಾಲಿ ಮನೆ, ಅಪಾರ್ಟ್‌ಮೆಂಟ್‌ಗೆ ವಿನಾಯಿತಿ?:** ಖಾಲಿ ಇರುವ ಮನೆ ಮತ್ತು ಅಪಾರ್ಟ್‌ಮೆಂಟ್‌ಗಳಿಗೆ ವಿದ್ಯುತ್ ಬಳಕೆ ಆಧಾರದ ಮೇಲೆ ಶುಲ್ಕ ರಿಯಾಯಿತಿಗೆ ಚರ್ಚೆ ನಡೆಸಲಾಗುತ್ತಿದೆ. ಎಷ್ಟು ರಿಯಾಯಿತಿ ನೀಡಬೇಕು ಎಂಬುದು ಇನ್ನೂ ಅಂತಿಮಗೊಂಡಿಲ್ಲ.



- **₹500ಗಿಂತ ಹೆಚ್ಚು ವಿದ್ಯುತ್ ಬಿಲ್ ಪಾವತಿದಾರರಿಗೆ 200 ಕಸ ಶುಲ್ಕ**
- **200ರಿಂದ 500 ಒಳಗೆ ವಿದ್ಯುತ್ ಬಿಲ್ ಕಟ್ಟುವವರಿಗೆ ರಿಯಾಯಿತಿ ನಿರ್ಧರಿಸಿಲ್ಲ**
- **ವಾಣಿಜ್ಯ ಕಟ್ಟಡಗಳಿಗೆ 500 ಕಸ ಶುಲ್ಕ ವಿಧಿಸಲು ಬಿಬಿಎಂಪಿ ನಿರ್ಧಾರ**

**ನಗರದ ಘನತ್ಯಾಜ್ಯ ನಿರ್ವಹಣೆಗೆ ಬಿಬಿಎಂಪಿಗೆ ವಾರ್ಷಿಕ ಒಂದು ಸಾವಿರ ಕೋಟಿ ರುಪಾಯಿಗೂ ಅಧಿಕ ವೆಚ್ಚ ಮಾಡಲಾಗುತ್ತಿದ್ದು, ನಿರ್ವಹಣೆ ಹೊರೆಯಾಗುತ್ತಿದೆ. ಸಾರ್ವಜನಿಕರಿಗೆ ಹೆಚ್ಚು ಹೊರೆ ಆಗದಂತೆ ಮಾಸಿಕ ಸೇವಾ ಶುಲ್ಕವನ್ನು ಬೆಸ್ಕಾಂ ಸಹಯೋಗದಲ್ಲಿ ಸಂಗ್ರಹಿಸಲಾಗುತ್ತದೆ. ಆದರೆ, ಯಾರಿಗೂ ಪೂರ್ಣ ಪ್ರಮಾಣದ ರಿಯಾಯಿತಿ ಇರುವುದಿಲ್ಲ.**

• **ತುಳಸಿ ಮದಿನೇನಿ,** ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತೆ

### ಶುಲ್ಕ ಪಾವತಿಸದಿದ್ದರೆ ವಿದ್ಯುತ್ ಕಡಿತ ಇಲ್ಲ



ಪ್ರತಿ ತಿಂಗಳು ಸಾರ್ವಜನಿಕರಿಗೆ ವಿದ್ಯುತ್ ಬಿಲ್ ಹಾಗೂ ಘನತ್ಯಾಜ್ಯ ಶುಲ್ಕ ಪ್ರತ್ಯೇಕವಾಗಿ ಬರಲಿದೆ. ಗ್ರಾಹಕರು ವಿದ್ಯುತ್ ಬಿಲ್ ಮಾತ್ರ ಪಾವತಿಸಿ ಘನತ್ಯಾಜ್ಯ ಸೇವಾ ಶುಲ್ಕ ಬಾಕಿ ಉಳಿಸಿಕೊಂಡರೆ ವಿದ್ಯುತ್ ಸಂಪರ್ಕ ಕಡಿತ ಮಾಡುವುದಿಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

### ಶುಲ್ಕ ಸಂಗ್ರಹಕ್ಕೆ ಬೆಸ್ಕಾಂ ಸಮ್ಮತಿ

ನಗರದಲ್ಲಿ 46 ಲಕ್ಷ ವಸತಿ ಹಾಗೂ 6.5 ಲಕ್ಷ ವಾಣಿಜ್ಯ ಕಟ್ಟಡಗಳು ವಿದ್ಯುತ್ ಸಂಪರ್ಕ ಪಡೆದಿದ್ದು, ವಿದ್ಯುತ್ ಬಿಲ್‌ನೊಂದಿಗೆ ಸೇವಾ ಶುಲ್ಕ ವಸೂಲಿಗೆ ಬೆಸ್ಕಾಂ ಒಪ್ಪಿಗೆ ನೀಡಿದೆ. ಬಿಬಿಎಂಪಿಗೆ ಮಾಸಿಕ ₹50 ಕೋಟಿ ಶುಲ್ಕ ಸಂಗ್ರಹವಾಗುವ ನಿರೀಕ್ಷೆ ಇದೆ. ಬಿಲ್ ಸಂಗ್ರಹಿಸಿದ್ದಕ್ಕೆ ಬೆಸ್ಕಾಂಗೆ ಬಿಬಿಎಂಪಿ ಶೇ.5ರಷ್ಟು ಸೇವಾ ಶುಲ್ಕ ನೀಡಲಿದೆ. ಪ್ರತಿ ತಿಂಗಳು ಘನತ್ಯಾಜ್ಯ ಶುಲ್ಕದ ಸಂಗ್ರಹ ಮತ್ತು ಬಾಕಿದಾರರ ವಿವರವನ್ನು ಬೆಸ್ಕಾಂ ಬಿಬಿಎಂಪಿಯ ಅಧಿಕಾರಿಗಳಿಗೆ ನೀಡಲಿದ್ದಾರೆ. ಬಿಬಿಎಂಪಿ ಆರೋಗ್ಯ ಅಧಿಕಾರಿಗಳು ಮತ್ತು ಮಾರ್ಷಲ್‌ಗಳು ಮನೆಗಳಿಗೆ ತೆರಳಿ ಶುಲ್ಕ ವಸೂಲು ಮಾಡಲಿದ್ದಾರೆ. ಶುಲ್ಕ ಪಾವತಿಸದಿದ್ದರೆ ತ್ಯಾಜ್ಯ ಸಂಗ್ರಹಣೆ ನಿಲ್ಲಿಸಲಾಗುತ್ತದೆ.

ಕನ್ನಡಪ್ರಭ

| Date | 29-11-2020 |
| --- | --- |
| Page No | 3 |

# 50 ಸಾವಿರ ವಿದ್ಯಾರ್ಥಿಗಳು, ಶಿಕ್ಷಕರಿಗೆ ಸೋಂಕು ಪರೀಕ್ಷೆ

**ಬೆಂಗಳೂರು:** ನಗರದಲ್ಲಿ ಶನಿವಾರ 1373 ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗೆ ನಡೆಸಿದ ಕೊರೋನಾ ಸೋಂಕು ಪರೀಕ್ಷೆಯಲ್ಲಿ ಯಾರಲ್ಲೂ ಸೋಂಕು ದೃಢಪಟ್ಟಿಲ್ಲ.

ಶನಿವಾರ 124 ಉಪನ್ಯಾಸಕರು, 1,145 ವಿದ್ಯಾರ್ಥಿಗಳು ಹಾಗೂ 104 ಸಹಾಯಕ ಸಿಬ್ಬಂದಿಯನ್ನು ಸೋಂಕು ಪರೀಕ್ಷೆಗೆ ಒಳಪಡಿಸಲಾಗಿದೆ. ಬಿಬಿಎಂಪಿಯ 76 ತಂಡ 359 ಕಡೆ ಸೋಂಕು ಪರೀಕ್ಷೆ ನಡೆಸಿದೆ ಎಂದು ಬಿಬಿಎಂಪಿ ತಿಳಿಸಿದೆ.

ನ.16 ರಿಂದ 28ರವರೆಗೆ ಬರೋಬ್ಬರಿ 50 ಸಾವಿರ ಪರೀಕ್ಷೆ ನಡೆಸಲಾಗಿದ್ದು, 220 ವಿದ್ಯಾರ್ಥಿ ಹಾಗೂ ಶಿಕ್ಷಕರಲ್ಲಿ ಸೋಂಕು ದೃಢಪಟ್ಟಿದೆ. ಬಿಬಿಎಂಪಿ ಎಂಟು ವಲಯಗಳ ಪೈಕಿ ಅತಿ ಹೆಚ್ಚು ರಾಜರಾಜೇಶ್ವರಿನಗರ 51 ವಿದ್ಯಾರ್ಥಿ ಶಿಕ್ಷಕರಲ್ಲಿ ಸೋಂಕು ದೃಢಪಟ್ಟಿದೆ. ಉಳಿದಂತೆ ಪೂರ್ವ 39, ಪಶ್ಚಿಮ 35, ಯಲಹಂಕ 33, ದಕ್ಷಿಣ 29, ದಾಸರಹಳ್ಳಿ 20, ಬೊಮ್ಮನಹಳ್ಳಿ 7 ಹಾಗೂ ಮಹದೇವಪುರ ವಲಯದಲ್ಲಿ 6 ವಿದ್ಯಾರ್ಥಿ, ಶಿಕ್ಷಕರು ಹಾಗೂ ಸಿಬ್ಬಂದಿಯಲ್ಲಿ ಕೋರೋನಾ ಸೋಂಕು ದೃಢಪಟ್ಟಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

# ನಿನ್ನೆ 719 ಕೊರೋನಾ ಕೇಸ್

**ಬೆಂಗಳೂರು:** ನಗರದಲ್ಲಿ 719 ಹೊಸ ಕೊರೋನಾ ಸೋಂಕು ಪ್ರಕರಣ ಪತ್ತೆಯಾಗಿದ್ದು, 1429 ಮಂದಿ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಏಳು ಮಂದಿ ಮೃತಪಟ್ಟಿದ್ದಾರೆ.

ಈವರೆಗೆ ಒಟ್ಟು ಸೋಂಕಿತರ ಸಂಖ್ಯೆ 3,68,604 ಏರಿಕೆಯಾಗಿದ್ದು, 3,46,116 ಗುಣಮುಖರಾಗಿದ್ದಾರೆ. ಸದ್ಯ ನಗರದಲ್ಲಿ 18,366 ಸಕ್ರಿಯ ಸೋಂಕಿತರಿದ್ದು, 184 ಮಂದಿಯ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಶನಿವಾರ ಏಳು ಮಂದಿ ಕೊರೋನಾ ಸೋಂಕಿನಿಂದ ಮೃತಪಟ್ಟಿದ್ದು, ಒಟ್ಟು ಮೃತರ ಸಂಖ್ಯೆ 4,121 ಏರಿಕೆಯಾಗಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

VK ವಿಜಯ ಕರ್ನಾಟಕ



| Date | 29-11-2020 |
| --- | --- |
| Page No | 7 |



# ನಗರದಲ್ಲಿ 719 ಮಂದಿಗೆ ಸೋಂಕು

| ಸೋಂಕಿತರು | ಗುಣಮುಖ |
| --- | --- |
| 3,68,604 | 3,46,116 |
| **ಸಕ್ರಿಯ** | **ಸಾವು** |
| 18,366 | 4212 |

**ಬೆಂಗಳೂರು:** ನಗರದಲ್ಲಿ ಕೊರೊನಾ ಸೋಂಕಿತರ ಸಂಖ್ಯೆಯು ಗಣನೀಯವಾಗಿ ಇಳಿಮುಖವಾಗುತ್ತಿದ್ದು, ಶನಿವಾರ ಹೊಸದಾಗಿ 719 ಮಂದಿಗೆ ಸೋಂಕು ತಗಲಿರುವುದು ದೃಢಪಟ್ಟಿದೆ. ಕೋವಿಡ್‌ಗೆ 7 ಮಂದಿ ಬಲಿಯಾಗಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿ 3,68,604 ಸೋಂಕಿತ ಪ್ರಕರಣಗಳು ಪತ್ತೆಯಾಗಿದ್ದು, ಇದರಲ್ಲಿ 3,46,116 ಮಂದಿ ಚೇತರಿಸಿಕೊಂಡಿದ್ದಾರೆ. ಉಳಿದ 18,366 ರೋಗಿಗಳು ನಿಗದಿತ ಆಸ್ಪತ್ರೆ, ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೊರೊನಾ ಸೋಂಕಿಗೆ ಒಳಗಾದವರಲ್ಲಿ ಇಲ್ಲಿಯವರೆಗೆ 4212 ಮಂದಿ ಸಾವಿಗೀಡಾಗಿದ್ದಾರೆ.

VK ವಿಜಯ ಕರ್ನಾಟಕ

| Date | 29-11-2020 |
|---|---|
| Page No | 8 |


ರಾಜಧಾನಿ ಜನರಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆ | ಗ್ರಾಮಾಂತರ ಪ್ರದೇಶದಲ್ಲಿ ಸೋಂಕಿನ ತೀವ್ರತೆ ಇಳಿಕೆ

# ಬೆಂಗಳೂರಿನಲ್ಲೇ ಅತಿ ಹೆಚ್ಚು ಕೊರೊನಾ ಸಕ್ರಿಯ ಕೇಸ್

■ ಮಂಜುನಾಥ ನಾಗಲೀಕರ್ ಬೆಂಗಳೂರು
manjunath.naglikar@timesgroup.com

ವಿಕ ವಿಶೇಷ



ರಾಜ್ಯದಲ್ಲಿ ಕಳೆದ ಒಂದೂವರೆ ತಿಂಗಳಿಂದ ಕೋವಿಡ್-19 ಸೋಂಕಿನ ಪ್ರಕರಣಗಳು ಕಡಿಮೆಯಾಗುತ್ತಿದೆ. ಆದರೆ, ರಾಜ್ಯದ ಒಟ್ಟಾರೆ ಸಕ್ರಿಯ ಕೇಸ್‌ಗಳ ಪೈಕಿ ಶೇ.74ರಷ್ಟು ಸಕ್ರಿಯ ಪ್ರಕರಣಗಳು ಬೆಂಗಳೂರು ನಗರದಲ್ಲೇ ವರದಿಯಾಗಿರುವುದು ನಗರದ ಮಂದಿಯಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆ ಎಂಬ ಮಾತಿಗೆ ಪುಷ್ಟಿ ನೀಡುತ್ತಿದೆ.

ಕೋವಿಡ್ ಸೋಂಕಿತರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರು ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬೆಂಗ ಳೂರು ಹೊರತಾದ ಜಿಲ್ಲೆಗಳು ಮತ್ತು ಗ್ರಾಮಾಂತರ ಪ್ರದೇಶಗಳು ಮತ್ತು ಕೊಳೆಗೇರಿ ಪ್ರದೇಶಗಳ ಜನರಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗಿದೆ. ಬೆಂಗಳೂರಿನಲ್ಲಿ ವಾಸಿಸುವವರಿಗೆ ರೋಗ ನಿರೋಧಕ ಶಕ್ತಿ ಕಡಿಮೆ ಇರುವ ಕಾರಣ ಇಲ್ಲೇ ಸಕ್ರಿಯ ಪ್ರಕರಣಗಳು ಹೆಚ್ಚಿವೆ ಎನ್ನುತ್ತಾರೆ ವೈದ್ಯರು.

ನ.28ರಂದು ರಾಜ್ಯದಲ್ಲಿನ 24,757 ಸಕ್ರಿಯ ಕೇಸ್‌ಗಳ ಪೈಕಿ 18,366 ಕೇಸ್‌ಗಳು ಬೆಂಗಳೂರಿನಲ್ಲೇ ಇವೆ. ಬೆಂಗಳೂರು ಹೊರತುಪಡಿಸಿ ಕರ್ನಾಟಕದಲ್ಲಿ 6,391 ಸಕ್ರಿಯ ಕೇಸ್‌ಗಳಿವೆ. ಬೆಂಗಳೂರಿನ ದಾಸರಹಳ್ಳಿ ವಲಯದಲ್ಲಿ ಅತಿ ಕಡಿಮೆ ಸೋಂಕು ಪ್ರಕರಣಗಳು ವರದಿಯಾಗಿವೆ. ಈ ಭಾಗದಲ್ಲಿ ಹೆಚ್ಚಾಗಿ ದುಡಿಯುವ ವರ್ಗವಿದೆ.

ಆದರೆ, ಪಶ್ಚಿಮ ವಲಯ ಮತ್ತು ದಕ್ಷಿಣ ವಲಯದಲ್ಲಿ ಹೆಚ್ಚು ಕೇಸ್‌ಗಳು ವರದಿಯಾಗಿವೆ. ದಕ್ಷಿಣ ಮತ್ತು ಪಶ್ಚಿಮ ವಲಯಗಳಲ್ಲಿ ಬೆಂಗಳೂರಿನ ಹಳೇ ಮತ್ತು ಅಭಿವೃದ್ಧಿ ಪ್ರದೇಶಗಳೂ ಇವೆ.

''ಬೆಂಗಳೂರಿನಲ್ಲಿ ಜನ ನಾಜೂಕಾಗಿದ್ದಾರೆ. ಆದರಲ್ಲೂ ಶ್ರೀಮಂತ ವರ್ಗದವರಿಗೆ ಸೋಂಕು ಹೆಚ್ಚು ಬಾಧಿಸುತ್ತಿದೆ. ಸಣ್ಣ ಪುಟ್ಟ ಆರೋಗ್ಯ ಸಮಸ್ಯೆಗಳಿಗೂ ಮಾತ್ರೆ, ಔಷಧಿ ಮತ್ತು ಚಿಕಿತ್ಸೆ ಪಡೆಯುತ್ತಾರೆ. ಮತ್ತೊಂದೆಡೆ ಗ್ರಾಮಾಂತರ ಅಥವಾ ದುಡಿಯುವ ವರ್ಗ ಮತ್ತು ಕೊಳೆಗೇರಿ ಪ್ರದೇಶಗಳ ಜನರು ಕುಡಿಯುವ ನೀರು, ಆಹಾರ ವಿಚಾರದ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ, ನದಿ, ಬಾವಿ, ಕೆರೆ, ಕುಂಟೆಯಿಂದ ತರುವ ನೀರನ್ನೇ ಕುಡಿಯುತ್ತಾರೆ. ಸಣ್ಣ ಪುಟ್ಟ ಆರೋಗ್ಯ ಸಮಸ್ಯೆಗಳಾದಾಗ ಕೂಡಲೇ ಮಾತ್ರೆ ತೆಗೆದುಕೊಳ್ಳದೇ ಮನೆ ಮದ್ದು, ರೋಗ ನಿರೋಧಕ ಶಕ್ತಿಯಿಂದ ಗುಣಮುಖರಾಗಲು ಕಾಯುತ್ತಾರೆ. ಇದೇ ಕಾರಣದಿಂದ ಸೋಂಕು ಹೆಚ್ಚು ಬಾಧಿಸಿಲ್ಲ,'' ಎಂದು ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಮ್‌ಗಳ ಸಂಘದ (ಫನಾ) ಅಧ್ಯಕ್ಷ ಡಾ. ಪ್ರಸನ್ನ ಅಭಿಪ್ರಾಯಪಟ್ಟರು.

''ವಿಶ್ವ ಆರೋಗ್ಯ ಸಂಸ್ಥೆ ಇತ್ತೀಚೆಗೆ ವೈರಸ್ ಕುರಿತು ನಡೆಸಿರುವ ಅಧ್ಯಯನದ ಪ್ರಕಾರ, ನಗರ ಪ್ರದೇಶಗಳ ಜನರೇ ಗ್ರಾಮಾಂತರ ಪ್ರದೇಶಗಳ ಜನರಿಗಿಂತ ಹೆಚ್ಚು ಬಾಧಿತರಾಗಿದ್ದಾರೆ,'' ಎಂದು ಅವರು ತಿಳಿಸಿದರು.

''ಪುಟ್ಟ ಪುಟ್ಟ ಮನೆಗಳು, ದೈಹಿಕ ಅಂತರ ಕಡಿಮೆ ಇರುವ ಕಾರಣಗಳಿಂದ ಕೊಳೆಗೇರಿ ಪ್ರದೇಶಗಳಲ್ಲಿ ಹೆಚ್ಚಿನ ಜನರು ಸೋಂಕಿಗೆ ಬಾಧಿತರಾಗಬೇಕಾಗಿತ್ತು. ಆದರೆ, ಹಾಗೆ ಆಗಿಲ್ಲ. ಅದಕ್ಕೆ ಕಾರಣ ಅವರಲ್ಲಿರುವ ಉತ್ತಮ ರೋಗ ನಿರೋಧಕ ಶಕ್ತಿ. ಬೆಂಗಳೂರಿನಲ್ಲಿ ಜನಸಾಂದ್ರತೆ ಹೆಚ್ಚಾಗಿದೆ. ಸೋಂಕಿತರ ಸಂಪರ್ಕಗಳು ಹೆಚ್ಚಿವೆ. ಆದರೆ, ಇತರ ಜಿಲ್ಲೆಗಳು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಚದುರಿದಂತೆ ಜನದಟ್ಟಣೆ ಕಾರಣ ಸೋಂಕಿತರಿಗೆ ಪ್ರಾಥಮಿಕ ಸಂಪರ್ಕಗಳು ಕಡಿಮೆ ಇರುತ್ತವೆ. ಈ ಎಲ್ಲ ಕಾರಣಗಳಿಂದ ಬೆಂಗಳೂರು ಹೊರತುಪಡಿಸಿ ಇತರ ನಗರಗಳಲ್ಲಿ ಸಕ್ರಿಯ ಕೇಸ್‌ಗಳು ಕಮ್ಮಿ ಇವೆ,'' ಎಂದು ರಾಜೀವ್‌ಗಾಂಧಿ ಎದೆರೋಗಗಳ ಆಸ್ಪತ್ರೆ ನಿರ್ದೇಶಕ ಡಾ.ಸಿ. ನಾಗರಾಜ್ ತಿಳಿಸಿದರು.

## ಸಕ್ರಿಯ ಪ್ರಕರಣಗಳ ಸಂಖ್ಯೆ

| ಬೆಂಗಳೂರು | |
|---|---|
| ದಿನಾಂಕ | ಸಕ್ರಿಯ ಕೇಸ್ |
| ಅಕ್ಟೋಬರ್ 25 | 51,672 |
| ನವೆಂಬರ್ 28 | 18,366 |
| ಕರ್ನಾಟಕ (ಬೆಂಗಳೂರು ಹೊರತುಪಡಿಸಿ) | |
| ಅಕ್ಟೋಬರ್ 25 | 29,378 |
| ನವೆಂಬರ್ 24 | 6,391 |

### ರಾಜಧಾನಿಯಲ್ಲಿ ಪಾಸಿಟಿವಿಟಿ ಪ್ರಮಾಣ ಹೆಚ್ಚು

ದೇಶದ ಪಾಸಿಟಿವಿಟಿ ಪ್ರಮಾಣ ಶೇ. 4ರ ಆಸುಪಾಸಿನಲ್ಲಿದೆ. ಬೆಂಗಳೂರು ಹೊರತುಪಡಿಸಿ ಕರ್ನಾಟಕದಲ್ಲಿ ಪಾಸಿಟಿವಿಟಿ ಪ್ರಮಾಣ ಶೇ.7.88ರಷ್ಟಿದೆ. ಬೆಂಗಳೂರಿನಲ್ಲಿ ಪಾಸಿಟಿವಿಟಿ ಪ್ರಮಾಣ 8.37ರಷ್ಟಿದೆ.

### ಜನಸಾಂದ್ರತೆಯಿಂದ ಪ್ರಕರಣ ಹೆಚ್ಚಳ

### ಪಶ್ಚಿಮ, ದಕ್ಷಿಣ ವಲಯಕ್ಕೆ ಹೋಲಿಸಿದಲ್ಲಿ ದಾಸರಹಳ್ಳಿಯಲ್ಲಿ ಸೋಂಕಿತರ ಸಂಖ್ಯೆ ಕಡಿಮೆ

ವಿಜಯ ಕರ್ನಾಟಕ

| Date | 29-11-2020 |
|---|---|
| Page No | 8 |

# ಕಸ ವಿಲೇವಾರಿ ಸೆಸ್ ಹೆಚ್ಚಳ ಖಂಡಿಸಿ ಪ್ರತಿಭಟನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಬಿಬಿಎಂಪಿ ಕಸ ನಿರ್ವಹಣೆಗಾಗಿ ಆಸ್ತಿ ತೆರಿಗೆ ಜತೆ ಉಪಕರವನ್ನು (ಸೆಸ್) 200ರೂ.ರಿಂದ 600 ರೂ.ಗೆ ಹೆಚ್ಚಳ ಮಾಡಲು ಹೊರಟಿರುವುದನ್ನು ವಿರೋಧಿಸಿ ಡಿ.2ರಂದು ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳುವುದಾಗಿ ಆಮ್ ಆದ್ಮಿ ಪಕ್ಷ ನಿರ್ಧರಿಸಿದೆ.

ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಅತ್ತೂರು ವಾರ್ಡ್ ಅಧ್ಯಕ್ಷೆ ಸುಹಾಸಿನಿ ಫಣಿರಾಜ್ ಮಾತನಾಡಿ, ''ರಾಜ್ಯ ಸರಕಾರ ಬಡವರನ್ನು ಸುಲಿಗೆ ಮಾಡಲು ಹೊರಟಿದೆ. ಈಗಾಗಲೇ ವಿದ್ಯುತ್ ಬಿಲ್ ಹೆಚ್ಚಳ ಮಾಡಿದೆ, ನಂತರ ನೀರಿನ ಬಿಲ್ ಹೆಚ್ಚಳಕ್ಕೆ ಕೈ ಹಾಕಿದೆ. ಈಗ ಅದು ಸಾಲದು ಎಂಬಂತೆ ಕಸ ಸಂಗ್ರಹ ಶುಲ್ಕ ಹೆಚ್ಚಳ ಮಾಡಲು ಹೊರಟಿರುವುದನ್ನು ಸಹಿಸಲಾಗದು,'' ಎಂದು ಆಕ್ರೋಶ ವ್ಯಕ್ತಪಡಿಸಿದರು.

''ಕೂಡಲೇ ಕಸ ಸಂಗ್ರಹ ಶುಲ್ಕ ಹೆಚ್ಚಳ ಆದೇಶವನ್ನು ಬಿಬಿಎಂಪಿ ಹಿಂಪಡೆಯದೇ ಹೋದರೆ, ಬಳಕೆದಾರರ ಶುಲ್ಕ ಕಟ್ಟದೆ ಕರ ನಿರಾಕರಣೆ ಚಳವಳಿ ಪ್ರಾರಂಭಿಸಬೇಕಾಗುತ್ತದೆ'' ಎಂದು ಬೆಂಗಳೂರು ರಾಜಕೀಯ ಚಟುವಟಿಕೆಗಳ ಉಸ್ತುವಾರಿ ಎಸ್.ವಿ. ಫಣಿರಾಜ್ ಎಚ್ಚರಿಕೆ ನೀಡಿದರು. ವಸಂತನಗರ ವಾರ್ಡ್ ಅಧ್ಯಕ್ಷೆ ಜನನಿ ಭರತ್ ಹಾಜರಿದ್ದರು.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 29-11-2020 |
|---|---|
| Page No | 5A |

# ತ್ಯಾಜ್ಯ ಶುಲ್ಕ ವಸೂಲಿಗೆ ಪಾಲಿಕೆ ಸಿದ್ಧತೆ

## ಪ್ರತಿ ಮನೆಯಿಂದ 200 ರೂ. ಸಂಗ್ರಹ | ಹೊಸ ವರ್ಷದಿಂದ ಜಾರಿಗೆ ಸಜ್ಜು

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ನಗರದಲ್ಲಿ ತ್ಯಾಜ್ಯ ನಿರ್ವಹಣೆಗೆ ಹಣಕಾಸಿನ ತೊಂದರೆಯನ್ನು ನಿವಾರಿಸಲು ಮುಂದಾಗಿರುವ ಬಿಬಿಎಂಪಿ, ಘನತ್ಯಾಜ್ಯ ನಿರ್ವಹಣಾ ಉಪನಿಯಮ-2020 ಜಾರಿಗೊಳಿಸಿ ಪ್ರತಿ ಮನೆಗೆ ತಲಾ 200 ರೂ. ಶುಲ್ಕ ಸಂಗ್ರಹಿಸಲು ಸಿದ್ಧತೆ ನಡೆದಿದೆ.

- » **ಘನತ್ಯಾಜ್ಯ ನಿರ್ವಹಣಾ ಉಪನಿಯಮದಡಿ ಹಣ ಸಂಗ್ರಹ**
- » **ಕರೆಂಟ್ ಬಿಲ್ ಜತೆಗೆ ಕಸದ ಬಿಲ್ ನೀಡುವ ಬೆಸ್ಕಾಂ ಸಿಬ್ಬಂದಿ**

ಈಗಾಗಲೇ ತೆರಿಗೆ ಸಂಗ್ರಹಣೆಯಲ್ಲಿ ಇಳಿಕೆ, ಆದಾಯಕ್ಕಿಂತ ಹೆಚ್ಚಿನ ವೆಚ್ಚ, ಗುತ್ತಿಗೆದಾರರಿಗೆ 2 ಸಾವಿರ ಕೋಟಿ ರೂ. ಬಾಕಿ ಮೊತ್ತ ಉಳಿಸಿಕೊಂಡಿರುವ ಪಾಲಿಕೆ ಹೊಸ ಆದಾಯದತ್ತ ಚಿತ್ತ ನೆಟ್ಟಿದೆ. ಹೀಗಾಗಿ, ಇತ್ತೀಚೆಗೆ ರಾಜ್ಯ ಸರ್ಕಾರ ಒಪ್ಪಿಗೆ ನೀಡಿದ್ದ ಘನತ್ಯಾಜ್ಯ ನಿರ್ವಹಣಾ ಉಪನಿಯಮ-2020 ಜಾರಿಗೊಳಿಸಲು ಮುಂದಾಗಿದೆ. ಈ ಮೂಲಕ ತ್ಯಾಜ್ಯ ಉತ್ಪಾದಕರರಾದ ಹೋಟೆಲ್, ಕಲ್ಯಾಣ ಮಂಟಪ, ಆಸ್ಪತ್ರೆ, ಶಾಪಿಂಗ್ ಮಾಲ್‌ಗಳಿಂದ ಹೊಸ ವರ್ಷದಿಂದ ಕಸ ಸಂಗ್ರಹಕ್ಕಾಗಿ ಮಾಸಿಕ 200 ರೂ. ಗಳಿಂದ 14 ಸಾವಿರ ರೂ.ವರೆಗೆ ಶುಲ್ಕ ವಸೂಲಿ ಮಾಡಲು ಸಿದ್ಧವಾಗಿದೆ. ವಿದ್ಯುತ್ ದರ ಏರಿಕೆಯಿಂದ ಬಳಲುತ್ತಿರುವ ನಗರದ ಜನತೆಗೆ, ತ್ಯಾಜ್ಯ ಶುಲ್ಕ ಹೊರೆಯಾಗಲಿದೆ.

**ಬೆಸ್ಕಾಂನಿಂದಲೇ ತ್ಯಾಜ್ಯ ಶುಲ್ಕ ವಸೂಲಿ:** ಪಾಲಿಕೆ ವ್ಯಾಪ್ತಿಯಲ್ಲಿ 46 ಲಕ್ಷ ವಸತಿ ಹಾಗೂ 6.5 ಲಕ್ಷ ಇತರೆ ಕಟ್ಟಡಗಳು ವಿದ್ಯುತ್ ಸಂಪರ್ಕ ಪಡೆದುಕೊಂಡಿವೆ. ವಿದ್ಯುತ್ ಬಿಲ್‌ನೊಂದಿಗೆ ತ್ಯಾಜ್ಯ ಶುಲ್ಕ ಸಂಗ್ರಹಣೆಗೆ ಬೆಸ್ಕಾಂ ಒಪ್ಪಿಗೆ ನೀಡಿದ್ದು, ಶೀಘ್ರ ಶುಲ್ಕ ಸಂಗ್ರಹ ಜಾರಿಯಾಗಲಿದೆ. ಇದರಿಂದ ಮಾಸಿಕ ಬಿಬಿಎಂಪಿಗೆ ಸುಮಾರು 50 ಕೋಟಿ ರೂ. ಸಂಗ್ರಹವಾಗುವ ನಿರೀಕ್ಷೆಯಿದೆ. ಬೆಸ್ಕಾಂ ವತಿಯಿಂದ ಶುಲ್ಕ ಸಂಗ್ರಹಿಸಿ ನೀಡುವ ಕಾರ್ಯಕ್ಕೆ ಪ್ರತಿಯಾಗಿ ಬಿಬಿಎಂಪಿ ಶೇ.5 ಸೇವಾ ಶುಲ್ಕವನ್ನು ಬೆಸ್ಕಾಂಗೆ ಪಾವತಿಸುತ್ತದೆ.

**ಬಾಕಿ ವಸೂಲಿಗೆ ಮಾರ್ಷಲ್ ನಿಯೋಜನೆ:** ಮಾಸಿಕ ವಿದ್ಯುತ್ ಬಿಲ್ ಜತೆಗೆ ತ್ಯಾಜ್ಯದ ಶುಲ್ಕ ಪಾವತಿ ಮಾಡದೆ ಬಾಕಿ ಉಳಿಸಿಕೊಂಡವರ ಬಗ್ಗೆ ಬೆಸ್ಕಾಂ ಪಾಲಿಕೆ ಅಧಿಕಾರಿಗಳಿಗೆ ಮಾಹಿತಿ ನೀಡಲಿದೆ. ನಂತರ ಪಾಲಿಕೆ ಆರೋಗ್ಯ ಅಧಿಕಾರಿಗಳು ಮತ್ತು ಮಾರ್ಷಲ್‌ಗಳು ಮನೆ-ಮನೆಗೆ ತೆರಳಿ ಶುಲ್ಕ ವಸೂಲು ಮಾಡಲಿದ್ದಾರೆ. ಒಂದು ವೇಳೆ ಶುಲ್ಕ ಪಾವತಿಸದಿದ್ದರೆ ಕಸ ಸಂಗ್ರಹಣೆ ನಿಲ್ಲಿಸಲಾಗುತ್ತದೆ. ಈ ಯೋಜನೆ ಡಿಸೆಂಬರ್ ಅಂತ್ಯಕ್ಕೆ ಅಥವಾ ಹೊಸ ವರ್ಷದ ಆರಂಭದಲ್ಲಿ ಜಾರಿಗೊಳ್ಳುವ ಸಾಧ್ಯತೆಯಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.



### ತ್ಯಾಜ್ಯ ಉತ್ಪಾದಕರಿಗೆ ಮಾಸಿಕ ಶುಲ್ಕ ಪ್ರಮಾಣ

ಘನತ್ಯಾಜ್ಯ ಉಪನಿಯಮ ಜಾರಿಗೊಂಡ ನಂತರ ಮನೆಗಳಿಗೆ ಮಾಸಿಕ 200 ರೂ., ದಿನಕ್ಕೆ 5 ಕೆ.ಜಿ ಗಿಂತ ಕಡಿಮೆ ಕಸ ಉತ್ಪಾದಕರಿಗೆ 500 ರೂ., 5 ರಿಂದ 10 ಕೆ.ಜಿ ಕಸ ಉತ್ಪಾದಕರಿಗೆ ದಿನಕ್ಕೆ 1,400 ರೂ., 11 ರಿಂದ 25 ಕೆ.ಜಿ ಕಸ ಉತ್ಪಾದಕರಿಗೆ ದಿನಕ್ಕೆ 3,500 ರೂ., 26 ರಿಂದ 50 ಕೆ.ಜಿ ಕಸ ಉತ್ಪಾದಕರಿಗೆ ದಿನಕ್ಕೆ 7 ಸಾವಿರ ರೂ. ಹಾಗೂ 100 ಕೆ.ಜಿಗಿಂತ ಹೆಚ್ಚಿನ ಕಸ ಉತ್ಪಾದಕರಿಗೆ ದಿನಕ್ಕೆ 14 ಸಾವಿರ ರೂ.ಗಳ ಶುಲ್ಕವನ್ನು ವಿಧಿಸಲಾಗುತ್ತದೆ.

---

ಘನತ್ಯಾಜ್ಯ ನಿರ್ವಹಣಾ ಶುಲ್ಕ ಪಾವತಿಸಲು ಯಾರೊಬ್ಬರೂ ವಿರೋಧ ಮಾಡುವಂತಿಲ್ಲ. ವಿರೋಧಿಸಿದರೆ ಅವರ ಮನೆಯಿಂದ ಕಸ ಸಂಗ್ರಹಣೆ ನಿಲ್ಲಿಸಲಾಗುತ್ತದೆ. ಜತೆಗೆ, ಆಯಾ ಮನೆಗಳ ಮೇಲೆ ನಿಗಾವಹಿಸಿ ಅವರು ರಸ್ತೆ ಅಥವಾ ಬೇರೆಡೆ ಕಸ ಬಿಸಾಡಿದರೆ 1 ಸಾವಿರ ರೂ.ಗಳ ದಂಡ ವಿಧಿಸಲಾಗುತ್ತದೆ. ಬೆಸ್ಕಾಂ ವತಿಯಿಂದ ತ್ಯಾಜ್ಯ ಶುಲ್ಕ ಸಂಗ್ರಹಣೆಗೆ ಒಪ್ಪಿಗೆ ನೀಡಿದ್ದು, ಶೀಘ್ರ ಸಂಗ್ರಹಣೆ ಕಾರ್ಯವನ್ನು ಆರಂಭ ಮಾಡಲಾಗುವುದು.

| ಡಿ. ರಂದೀಪ್ ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತ

ವಿಜಯವಾಣಿ
ಕನ್ನಡಿಗರ ಧ್ವನಿ



| Date | 29-11-2020 |
|---|---|
| Page No | 9 |



# ಡಬ್ಲ್ಯುಇಎಫ್‌ನಿಂದ ಬೆಂಗ್ಳೂರು ಅಧ್ಯಯನ!

## 22 ರಾಷ್ಟ್ರಗಳ 36 ಉತ್ತಮ ತಾಂತ್ರಿಕ ನಗರಗಳಲ್ಲಿ ಸಿಲಿಕಾನ್ ಸಿಟಿಗೂ ಸ್ಥಾನ

■ ಸತೀಶ್ ಕಂದಗಲ್‌ಪುರ ಬೆಂಗಳೂರು

ಜಿ20 ರಾಷ್ಟ್ರಗಳಲ್ಲಿ ಎಲ್ಲ ನಗರಗಳನ್ನು ಸ್ಮಾರ್ಟ್ ಸಿಟಿಗಳಾಗಿ ಅಭಿವೃದ್ಧಿ ಮಾಡಲು ಹೊಸ ಜಾಗತಿಕ ಮಾರ್ಗಸೂಚಿ ರೂಪಿಸಲು ವಿಶ್ವ ಆರ್ಥಿಕ ಒಕ್ಕೂಟದಿಂದ (ಡಬ್ಲ್ಯುಇಎಫ್) ಮುಂದಾಗಿದ್ದು, ಉತ್ತಮ ತಾಂತ್ರಿಕತೆ ಅಳವಡಿಸಿಕೊಂಡ 22 ರಾಷ್ಟ್ರಗಳಲ್ಲಿನ 36 ನಗರಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ನಗರಗಳ ಪಟ್ಟಿಯಲ್ಲಿ ಸಿಲಿಕಾನ್ ಸಿಟಿ ಬೆಂಗಳೂರು ಕೂಡ ಸ್ಥಾನ ಪಡೆದಿದೆ. ತಂತ್ರಜ್ಞಾನ, ಸಾರ್ವಜನಿಕ ಆಸ್ತಿಗಳ ದಾಖಲೆ ಗೌಪ್ಯತೆ, ಸಂರಕ್ಷಣೆ, ಸಾರ್ವಜನಿಕರ ಬಳಕೆಗೆ ಉತ್ತಮ ಬ್ರಾಡ್‌ಬ್ಯಾಂಡ್ ಸೇವೆ, ಸೈಬರ್ ಸುರಕ್ಷತೆ ಮತ್ತು ದತ್ತಾಂಶಗಳ ರಕ್ಷಣಾ ಹೊಣೆಗಾರಿಕೆ, ಇಂಟರ್‌ನೆಟ್ ಮುಕ್ತತೆ, ಅಂಗವಿಕಲರಿಗೆ ಮತ್ತು ವೃದ್ಧರಿಗೆ ಡಿಜಿಟಲ್ ಸೇವೆ ಅವಕಾಶಗಳನ್ನು ಅಧ್ಯಯನ ಮಾಡಲಾಗುತ್ತಿದೆ. ಜತೆಗೆ, ಸರ್ಕಾರ, ಪ್ರಾದೇಶಿಕತೆ, ಸ್ಥಳೀಯ ಆಡಳಿತ, ಖಾಸಗಿ ವಲಯ ಮತ್ತು ನಗರ ನಿವಾಸಿಗಳ ಸಮನ್ವಯವನ್ನೂ ಅಧ್ಯಯನದಲ್ಲಿ ಪರಿಗಣಿಸಲಾಗುತ್ತದೆ. ಜಿ20 ರಾಷ್ಟ್ರಗಳಲ್ಲಿ ದುಬೈ (ಯುಎಇ), ಬಾರ್ಸಿಲೋನಾ (ಸ್ಪೇನ್), ಲಂಡನ್ (ಯುಕೆ), ಮಾಸ್ಕೋ (ರಷ್ಯಾ), ಮೆಕ್ಸಿಕನ್ ಸಿಟಿ (ಮೆಕ್ಸಿಕೋ), ಬ್ರೆಜಿಲಿಯಾ (ಬ್ರೆಜಿಲ್), ಇಸ್ತಾಂಬುಲ್ (ಟರ್ಕಿ) ಮುಂತಾದ ಸ್ಮಾರ್ಟ್ ನಗರಗಳ ಅಧ್ಯಯನ ಮಾಡಲಾಗುವುದು. ಭಾರತದ ಬೆಂಗಳೂರು, ಹೈದರಾಬಾದ್, ಇಂದೋರ್ ಹಾಗೂ ಫರೀದಾಬಾದ್ ನಗರಗಳನ್ನು ಆಯ್ಕೆ ಮಾಡಲಾಗಿದೆ.



ವಿಶ್ವ ಆರ್ಥಿಕ ಒಕ್ಕೂಟದ ಅಧ್ಯಯನಕ್ಕೆ ನಾವು ಕೇವಲ ಭಾಗವಹಿಸುತ್ತಿದ್ದೇವೆ. ಗುಪ್ತ ಅಂಶಗಳ ಮಾಹಿತಿ ಅಥವಾ ಇದಕ್ಕೆ ಅಧ್ಯಯನದಲ್ಲಿ ಪಾಲುದಾರರಾಗಿ ಭಾಗಹಿಸುತ್ತಿಲ್ಲ. ನಗರದ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ಬೆಂಗಳೂರಿನಿಂದ ಚಟುವಟಿಕೆಯಲ್ಲಿ ಭಾಗವಹಿಸಲಿದ್ದಾರೆ.

| ಎನ್. ಮಂಜುನಾಥ್ ಪ್ರಸಾದ್ ಬಿಬಿಎಂಪಿ ಆಯುಕ್ತ

### ಬಿಬಿಎಂಪಿ ಒಪ್ಪಿಗೆ

ಜಾಗತಿಕ ಅಧ್ಯಯನಕ್ಕೆ ಆಯ್ಕೆಯಾದ ನಗರಗಳು ವಿಶ್ವ ಜಾಗತಿಕ ಒಕ್ಕೂಟದ ಸದಸ್ಯರೊಂದಿಗೆ ಸಂಪರ್ಕ ಸಾಧಿಸಬೇಕು. ನಗರದ ತಾಂತ್ರಿಕ ಬೆಳವಣಿಗೆ ಎದುರಾದ ಸಮಸ್ಯೆ, ಅದನ್ನು ನಿವಾರಣೆ ಮಾಡಲು ಕೈಗೊಂಡ ಕ್ರಮಗಳ ಕುರಿತ ಮಾಹಿತಿ ನೀಡಬೇಕು. ಅಲ್ಲದೆ, ಉಳಿದ 35 ನಗರಗಳಿಂದ ಬರುವ ಮಾಹಿತಿಗಳನ್ನು ಸ್ವೀಕರಿಸಿ ಒಕ್ಕೂಟದ ಸಲಹೆಗಳನ್ನು ಸ್ವೀಕರಿಸಲು ಅವಕಾಶವಿದೆ. ಅಧ್ಯಯನದಲ್ಲಿ ಪಾಲ್ಗೊಳ್ಳಲು ಬಿಬಿಎಂಪಿ ಒಪ್ಪಿಗೆ ನೀಡಿದೆ.

### ಬೆಳವಣಿಗೆಗೆ ಪೂರಕ

ಈ ಜಾಗತಿಕ ಅಧ್ಯಯನದಲ್ಲಿ ಮಾಸಿಕ ಸಭೆಯಲ್ಲಿ ಸ್ಥಳೀಯ ಅಧಿಕಾರಿಗಳು ಭಾಗವಹಿಸುವುದರಿಂದ ಇತರೆ ದೇಶಗಳಲ್ಲಿ ಬೇರೆ ನಗರಗಳು ಅಳವಡಿಸಿಕೊಂಡ ಮಾಹಿತಿ ಲಭ್ಯವಾಗುತ್ತದೆ. ಇದನ್ನು ನಮ್ಮ ಬೆಂಗಳೂರಿಗೆ ಅನ್ವಯ ಮಾಡಿಕೊಂಡು ಸ್ಥಳೀಯ ನಾಗರಿಕರಿಗೆ ಉತ್ತಮ ಸೇವೆಗಳನ್ನು ನೀಡಬಹುದು. ಸಿಲಿಕಾನ್ ಸಿಟಿಯಲ್ಲಿ ಅಂಗವಿಕಲರಿಗೆ ಹೆಚ್ಚು ಡಿಜಿಟಲ್ ಸೌಲಭ್ಯ ಹಾಗೂ ಅವರ ಸಂಚಾರಕ್ಕೆ ಸೂಕ್ತ ವ್ಯವಸ್ಥೆಗಳಿಲ್ಲ. ಇದಕ್ಕೆ ಪರಿಹಾರ ಸಿಗುವ ಆಶಾಭಾವವಿದೆ. ನಗರದಲ್ಲಿ ಜಾಗತಿಕ ಮುಕ್ತತೆಗೆ ಒದಗಿಸಿದ ಸೌಲಭ್ಯಗಳ ಬಗ್ಗೆ ಎಲ್ಲ ರಾಷ್ಟ್ರಗಳಿಗೆ ಮಾಹಿತಿ ಲಭ್ಯವಾಗುವ ಮೂಲಕ ಅಂತರಾಷ್ಟ್ರೀಯ ವ್ಯಾಪಾರ ಒಪ್ಪಂದ, ವಾಣಿಜ್ಯೋದ್ಯಮ ಬೆಳವಣಿಗೆಗೆ ಪೂರಕವಾಗಲಿದೆ.

ವಿಶ್ವವಾಣಿ

| Date | 29-11-2020 |
|---|---|
| Page No | 5 |


# ಮತದಾರರ ಪಟ್ಟಿ ಪರಿಷ್ಕರಣೆಗೆ ಅವಕಾಶ

ಬೆಂಗಳೂರು: ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ 2020-2021ನೇ ಸಾಲಿನ ಮತದಾರರ ಪಟ್ಟಿ ಪರಿಷ್ಕರಣೆಯ ಅಭಿಯಾನ ಆರಂಭಗೊಂಡಿದ್ದು, ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳುವ ಅವಕಾಶ ನೀಡಲಾಗಿದೆ. ಮತದಾರರ ಪಟ್ಟಿಯಿಂದ ಕೈಬಿಟ್ಟು ಹೋಗಿರುವ ಹೆಸರನ್ನು ಮತ್ತೆ ಸೇರಿಸಲು ಅಥವಾ ಹೊಸದಾಗಿ ಹೆಸರು ನೋಂದಣಿ ಮಾಡಿಸಲು ಚುನಾವಣಾ ಆಯೋಗದಿಂದ ಅಭಿಯಾನ ನಡೆಯಲಿದೆ. ನ.29, ಡಿ.6 ಹಾಗೂ 13ರಂದು ಮೂರು ದಿನ ಮತದಾರರ ಅಭಿಯಾನ ನಡೆಯಲಿದ್ದು, ಈ ಮೂರು ದಿನಗಳಲ್ಲಿ ಕರಡು ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರ್ಪಡೆಗೊಳಿಸಲು ಸೂಚಿಸಿದೆ.

ಉದಯವಾಣಿ
ಜನಮನದ ಜೀವನಾಡಿ

| Date | 29-11-2020 |
| --- | --- |
| Page No | 2 |

ತಾನು ಉತ್ಪಾದಿಸಿದ ತ್ಯಾಜ್ಯ ನೀರು ತಾನೇ ಬಳಕೆ! | ನಿತ್ಯ 1.80 ಲಕ್ಷ ವಾರ್ಷಿಕ ನೀರು ಉಳಿತಾಯ: ಐಐಎಸ್ಸಿ ಸಂಶೋಧನೆ

# ತ್ಯಾಜ್ಯ ನೀರು ಸಂಸ್ಕರಣೆ, ಮರುಬಳಕೆ ವ್ಯವಸ್ಥೆ ಅಭಿವೃದ್ಧಿ

**ಬೆಂಗಳೂರು:** ಅತ್ಯಂತ ಕಡಿಮೆ ವೆಚ್ಚದಲ್ಲಿ ವಿಕೇಂದ್ರೀಕೃತ ತ್ಯಾಜ್ಯನೀರು ಸಂಸ್ಕರಣೆ ಮತ್ತು ಮರುಬಳಕೆ ವ್ಯವಸ್ಥೆಯನ್ನು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ಅಭಿವೃದ್ಧಿಪಡಿಸಿದ್ದು, ಇಂತಹ ದ್ದೊಂದು ಸುಸ್ಥಿರ ವ್ಯವಸ್ಥೆಗೆ ಚಾಮರಾಜನಗರದ ಬೆರಂಬಾಡಿ ಗ್ರಾಮದ ಪ್ರಾಥಮಿಕ ಶಾಲೆ ಸಾಕ್ಷಿಯಾಗುತ್ತಿದೆ.

ಶಾಲೆಯಲ್ಲಿ ಮಧ್ಯಾಹ್ನದ ಬಿಸಿಯೂಟದಿಂದ ವಿವಿಧ ಪ್ರಕಾರದ ತ್ಯಾಜ್ಯನೀರು ಉತ್ಪಾದನೆಯಾಗುತ್ತಿದೆ. ಉದಾಹರಣೆಗೆ ಅಡುಗೆ, ಪಾತ್ರೆ ಮತ್ತು ಪ್ಲೇಟ್‌ಗಳನ್ನು ತೊಳೆದಿದ್ದು ಸೇರಿದಂತೆ ಹಲವು ಉದ್ದೇಶಗಳಿಗೆ ಬಳಕೆಯಾದ ನೀರನ್ನು ಐಐಎಸ್ಸಿಯ ಸುಸ್ಥಿರ ತಂತ್ರಜ್ಞಾನಗಳ ಕೇಂದ್ರ (ಸಿಎಸ್‌ಟಿ)ದ ವಿಜ್ಞಾನಿಗಳು ವೈಜ್ಞಾನಿಕವಾಗಿ ಸಂಸ್ಕರಣೆ ಮಾಡಿ ಮರುಬಳಕೆಗೆ ಯೋಗ್ಯವಾದ ನೀರನ್ನು ಪೂರೈಸುವ ವ್ಯವಸ್ಥೆ ಅಭಿವೃದ್ಧಿಪಡಿಸಿದ್ದಾರೆ. ಈ ಮೂಲಕ ಬೆರಂಬಾಡಿ ಶಾಲೆ ಉತ್ಪಾದಿಸುವ ತ್ಯಾಜ್ಯ ನೀರನ್ನು ಸ್ವತಃ ತಾನೇ ಶುದ್ಧೀಕರಿಸಿ, ಮರುಬಳಕೆ ಮಾಡುವ ವ್ಯವಸ್ಥೆ ಹೊಂದಿದೆ.

'ನೀರು ಸಂಸ್ಕರಣಾ ಎಂಜಿನಿಯರಿಂಗ್' ಕುರಿತು ಪ್ರಕಟಗೊಂಡ ವಿಜ್ಞಾನಕ್ಕೆ ಸಂಬಂಧಿಸಿದ ಜರ್ನಲ್‌ನಲ್ಲಿ ಈ ಬಗ್ಗೆ ಪ್ರಸ್ತಾಪಿಸಲಾಗಿದ್ದು, ಇಂಗ್ಲೆಂಡ್‌ನ ಸ್ಕಾಟ್‌ಲ್ಯಾಂಡ್ ಜೇಮ್ಸ್ ಹಾಟನ್ ಇನ್‌ಸ್ಟಿಟ್ಯೂಟ್ ಆಫ್ ದಿಯೂನಿವರ್ಸಿಟಿಗ್ಲಾಸ್ಗೋಸಹಯೋಗದಲ್ಲಿ ಈ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿ, ಪ್ರಾಯೋಗಿಕವಾಗಿ ಬೆರಂಬಾಡಿ ಪ್ರಾಥಮಿಕ ಶಾಲೆಯಲ್ಲಿ ಅಳವಡಿಸಲಾಗಿದೆ. ಇದರಿಂದ ಆ ಶಾಲೆಯಲ್ಲಿವಾರ್ಷಿಕ 1.80 ಲಕ್ಷ ಅಂದರೆ ನಿತ್ಯ 667 ಲೀ. ನೀರಿನ ಉಳಿತಾಯ ಆಗುತ್ತಿದೆ ಎಂದು ಸಿಎಸ್‌ಟಿ ಸಹಾಯಕ ಪ್ರಾಧ್ಯಾಪಕ ಹಾಗೂ ಜರ್ನಲ್‌ನ ಹಿರಿಯ ಲೇಖಕ ಲಕ್ಷ್ಮೀನಾರಾಯಣ ರಾವ್ ತಿಳಿಸುತ್ತಾರೆ.



## ನೀರಿನಿಂದ ರಾಸಾಯನಿಕ ಪ್ರತ್ಯೇಕಗೊಳಿಸಲಾಗುತ್ತೆ

ಶಾಲೆಯಿಂದ ಉತ್ಪತ್ತಿಯಾಗುವ 'ಬೂದು ನೀರು' (ಬಳಕೆಯಾದ ತ್ಯಾಜ್ಯನೀರು) ಅನ್ನು ಅನಗತ್ಯ ವಸ್ತುಗಳನ್ನು ತೆಗೆದುಹಾಕಿ, ಮೊದಲ ಬಳಕೆ ಸಂದರ್ಭದಲ್ಲಿದ್ದ ಗುಣಮಟ್ಟಕ್ಕೆ ತರಲಾಗುತ್ತದೆ. ಈ ವೇಳೆ ಕಣ್ಣಿಗೆ ಕಾಣುವ ಹಾಗೂ ಕಾಣದ ಭೌತಿಕ-ಜೈವಿಕ ರಾಸಾಯನಿಕಗಳನ್ನು ನೀರಿನಿಂದ ಪ್ರತ್ಯೇಕಗೊಳಿಸಲಾಗುತ್ತದೆ. ಹೀಗೆ ಸಂಸ್ಕರಣೆಯಾದ ನೀರನ್ನು ಶಾಲೆಯ ಶೌಚಾಲಯಗಳ ಸ್ವಚ್ಛತೆ, ಕೈ-ಕಾಲು ತೊಳೆಯುವುದು ಸೇರಿ ಹಲವು ಉದ್ದೇಶಗಳಿಗೆ ಉಪಯೋಗಿಸಲಾಗುತ್ತಿದೆ. ಸುಮಾರು ಒಂದೂವರೆ ವರ್ಷದಿಂದ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿತ್ತು ಎನ್ನಲಾಗಿದೆ.



'ಈ ವ್ಯವಸ್ಥೆ ಯಶಸ್ವಿಯಾದ ಬೆನ್ನಲ್ಲೇ ರಾಜ್ಯದ ಅನೇಕ ಶಾಲೆಗಳು ಈ ಮಾದರಿ ಅನುಸರಿಸಲು ಆಸಕ್ತಿ ತೋರಿಸಿವೆ. ಈಗಾಗಲೇ ಹಲವರು ತಮ್ಮನ್ನು ಸಂಪರ್ಕಿಸಿದ್ದು ಬೆರಂಬಾಡಿಯಲ್ಲಿನ ವಿಕೇಂದ್ರೀಕೃತ ತ್ಯಾಜ್ಯ ನೀರು ಸಂಸ್ಕರಣಾ ವ್ಯವಸ್ಥೆ ಅಳವಡಿಸಲು ಮನವಿಮಾಡಿವೆ' ಎಂದುಲಕ್ಷ್ಮೀನಾರಾಯಣ ರಾವ್ ತಿಳಿಸಿದ್ದಾರೆ.

ಉದಯವಾಣಿ
ಜನಮನದ ಜೀವನಾಡಿ

| Date | 29-11-2020 |
| --- | --- |
| Page No | 3 |


ದಂಡನೂ ಬೇಡ ಸೋಂಕೂ ಬೇಡ...

ಮಾಸ್ಕ್ ಧರಿಸೋಣ

ನಿನ್ನೆಯ

# ದಂಡಯಾತ್ರೆ

28.11.2020 ಶನಿವಾರ

| ಮಾಸ್ಕ್ ಧರಿಸದ ಪ್ರಕರಣ | ದಂಡ ಸಂಗ್ರಹ |
| --- | --- |
| 1716 | 4.29 ಲಕ್ಷ ರೂ. |

39 ಸಾಮಾಜಿಕ ಅಂತರ ಕಾಪಾಡದ ಪ್ರಕರಣ

9750 ರೂ. ದಂಡ ಸಂಗ್ರಹ

ಸಂಯುಕ್ತ ಕರ್ನಾಟಕ

| Date | 29-11-2020 |
| --- | --- |
| Page No | 2 |

# ಮೇಯರ್ ಮುತ್ತಣ್ಣ ಮಾದರಿ ಡಾ. ರಾಜ್ ಪುತ್ಥಳಿ ಅನಾವರಣ

**ಸಂ.ಕ.ಸಮಾಚಾರ ಬೆಂಗಳೂರು**

ಪಾಲಿಕೆ ಆವರಣದಲ್ಲಿ ವರನಟ ಡಾ. ರಾಜಕುಮಾರ್ ಅವರ ಮೇಯರ್ ಮುತ್ತಣ್ಣ ಮಾದರಿಯ ಪುತ್ಥಳಿಯನ್ನು ಅನಾವರಣ ಮಾಡಲಾಯಿತು.

ನಂತರ ಶಿವರಾಜಕುಮಾರ್ ಮಾತನಾಡಿ, ಅಪ್ಪಾಜಿ ಮೇಯರ್ ಮುತ್ತಣ್ಣ ಸಿನಿಮಾ ಮಾಡಿದ ಬಳಿಕ ಸಾಕಷ್ಟು ಯುವಜನರಿಗೆ ಸ್ಫೂರ್ತಿ ಆಯ್ತು. ಆ ಗೌರವ ನಮಗೆ ಸಿಗುತ್ತಿರುವುದು ನಮ್ಮ ಪುಣ್ಯ. ಅಪ್ಪಾಜಿ ಹಾಕಿದ ದಾರಿಯಲ್ಲೇ ನಾವು ನಡೆಯುತ್ತಿದ್ದೇವೆ. ಅಪ್ಪಾಜಿಯಷ್ಟು ಗೌರವ ನಮಗೆ ಇಲ್ಲದೇ ಹೋದರೂ ಅವರಿಗೆ ಸಿಗುತ್ತಿದ್ದ ಶೇಕಡ ಇಪ್ಪತ್ತರಷ್ಟಾದರೂ ಸಿಕ್ಕರೆ ಸಾಕು. ಏಕೆಂದರೆ, ಜನರ ಪ್ರೀತಿಗೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ ಎಂದರು.

ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಮಾತನಾಡಿ, ಇಂದು ನಡೆಯುತ್ತಿರುವುದು ಕನ್ನಡ ಹಬ್ಬ. ನಗರದ ಜನರ ಸೇವೆಗೆ ನಿರತವಾಗಿರುವ ಪಾಲಿಕೆ ಆವರಣದಲ್ಲಿ ಡಾ. ಬಿ.ಆರ್. ಅಂಬೇಡ್ಕರ್, ಸಾಲಪ್ಪ, ಲಕ್ಷ್ಮೀದೇವಿ, ಡಾ. ರಾಜಕುಮಾರ್ ಸೇರಿ ಮಹನೀಯರ ಪುತ್ಥಳಿಗಳನ್ನು ಪ್ರತಿಷ್ಠಾಪಿಸುವ ಮೂಲಕ ಈ ಆವರಣ ಪವಿತ್ರವಾಗಿದೆ ಎಂದರಲ್ಲದೆ, ಡಾ. ರಾಜಕುಮಾರ್ ಅವರ ಸರಳತೆಯನ್ನು ಬಿಬಿಎಂಪಿ ನೌಕರರು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ನಿರ್ಮಾಪಕ ಎಸ್.ಎ. ಗೋವಿಂದರಾಜ್, ಬೆಂಗಳೂರು ದಕ್ಷಿಣ ಜಿಲ್ಲೆ ಬಿಜೆಪಿ ಅಧ್ಯಕ್ಷ ಎನ್.ಆರ್. ರಮೇಶ್, ಮಾಜಿ ಮೇಯರ್‌ಗಳಾದ ಜೆ. ಹುಚ್ಚಪ್ಪ, ಗೌತಮ್ ಕುಮಾರ್, ಸಂಘದ ಅಧ್ಯಕ್ಷ ಸಂಗೊಳ್ಳಿ ಕೃಷ್ಣಮೂರ್ತಿ, ಪ್ರಧಾನ ಕಾರ್ಯದರ್ಶಿ ಅಮೃತರಾಜ್, ಪಾಲಿಕೆ ಕನ್ನಡ ಸಂಘದ ಪದಾಧಿಕಾರಿ ಗಳು, ನೌಕರರು ಭಾಗವಹಿಸಿದ್ದರು.



**ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ಡಾ. ರಾಜಕುಮಾರ್ ಅವರ ಪುತ್ಥಳಿಯನ್ನು ನಟ ಶಿವರಾಜಕುಮಾರ್ ಉದ್ಘಾಟಿಸಿದರು.**

ಸಂಯುಕ್ತ ಕರ್ನಾಟಕ

| Date | 29-11-2020 |
| --- | --- |
| Page No | 2 |


# ಘನತ್ಯಾಜ್ಯಕ್ಕೆ ಶುಲ್ಕ ಆಕ್ರೋಶ



**ಸಂ.ಕ.ಸಮಾಚಾರ ಬೆಂಗಳೂರು**

ಕಸದ ಸಮಸ್ಯೆಗೆ ಪರಿಹಾರಕ್ಕಾಗಿ ಬಿಬಿಎಂಪಿ ಉಪಕರದ ಹೆಸರಿನಲ್ಲಿ ಶುಲ್ಕ ವಸೂಲಿ ಮಾಡಲು ಕೈಗೊಳ್ಳಲಾಗುತ್ತಿರುವ ನಿರ್ಧಾರಕ್ಕೆ ಸಾರ್ವಜನಿಕವಾಗಿ ವಿರೋಧ ವ್ಯಕ್ತವಾಗಿದೆ.

ನೀರು ಹಾಗೂ ವಿದ್ಯುತ್‌ಗೆ ನಾಗರಿಕರು ಮಾಸಿಕವಾಗಿ ಶುಲ್ಕ ಪಾವತಿ ಮಾಡುವಂತೆ ಕಸಕ್ಕೂ ಪ್ರತಿ ತಿಂಗಳು ಪ್ರತಿ ಮನೆಗೆ 200 ರೂ. ಶುಲ್ಕ ವಿಧಿಸಲು ಬಿಬಿಎಂಪಿ ಮುಂದಾಗಿದೆ. ಇದಕ್ಕೆ ಸಾರ್ವಜನಿಕವಾಗಿ ಟೀಕೆ ವ್ಯಕ್ತವಾಗಿದೆಯಲ್ಲದೆ, ಪ್ರತಿ ವರ್ಷ 1 ಸಾವಿರ ಕೋಟಿ ರೂ. ವೆಚ್ಚ ಮಾಡುತ್ತಿದ್ದರೂ ಕಸದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗದ ಬಿಬಿಎಂಪಿ ಈಗ ನಾಗರಿಕರ ಮೇಲೆ ಹೊರೆಹಾಕಲು ಹೊರಟಿದೆ. ಇಂತಹ ಕ್ರಮದಿಂದ ಕಸದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಆಗುವುದಿಲ್ಲ. ಶುಲ್ಕ ವಿಧಿಸುವ ಮೂಲಕ ಪರಿಹಾರ ಕಂಡುಕೊಳ್ಳಲು ಹೊರಟಿರುವುದು ಹಾಸ್ಯಾಸ್ಪದ. ತಾನು ಮಾಡಬೇಕಾದ ಕೆಲಸವನ್ನು ಸಮರ್ಪಕವಾಗಿ ಮಾಡದೆ ಕಸದ ಶುಲ್ಕ ಎಂದು ಜನರ ಸುಲಿಗೆ ಮಡಲು ಹೊರಟಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈಗಾಗಲೇ ವಿದ್ಯುತ್ ಬಿಲ್ ಹೆಚ್ಚಳ ಮಾಡಲಾಗಿದೆ. ನಾವು ದರ ಹೆಚ್ಚಳ ಮಾಡಿಲ್ಲ ಎಂದು ಹೇಳುವ ಜಲಮಂಡಳಿ ಅವೈಜ್ಞಾನಿಕವಾಗಿರುವ ಮಳೆಕೊಯ್ಲು ಹೆಸರಿನಲ್ಲಿ ಮನೆ ಮಾಲೀಕರಿಗೆ ಬಿಲ್ ಮೇಲೆ ದಂಡದ ರೂಪದಲ್ಲಿ ವಸೂಲಿ ಮಾಡುತ್ತಿದೆ. ಇನ್ನೇನು ನೀರಿನ ದರ ಹೆಚ್ಚಳ ಮಾಡಲು ತಯಾರಿ ನಡೆಸಿದೆ.

ಜನವರಿಯಿಂದ ಕಸದ ಶುಲ್ಕ ವಸೂಲಿ ಮಾಡಲು ಪಾಲಿಕೆ ಹೊರಟಿದೆ. ಇದಕ್ಕೆ ಸರ್ಕಾರ ಅನುಮತಿ ನೀಡಬಾರದು. ಸ್ವಚ್ಛತಾ ಕಾರ್ಯವನ್ನು ಸ್ಥಳೀಯ ಸಂಸ್ಥೆಗಳು ಮಾಡಬೇಕು. ಅದನ್ನು ಸಮರ್ಪಕವಾಗಿ ಮಾಡಲಿ. ಮೊದಲಿನಿಂದಲೂ ಸಮಸ್ಯೆಗಳನ್ನು ಹುಟ್ಟುಹಾಕುತ್ತಿರುವ ಬಿಬಿಎಂಪಿ ನೂರಾರು ಕೋಟಿ ವೆಚ್ಚ ಮಾಡಿ ಕಸ ಸಂಸ್ಕರಣಾ ಘಟಕಗಳನ್ನು ನಿರ್ಮಾಣ ಮಾಡಿದೆ. ಪ್ರಸ್ತುತ ಆಸ್ತಿ ತೆರಿಗೆ ಪಾವತಿ ಸಂದರ್ಭದಲ್ಲಿ ಕಸದ ಸೆಸ್ ಎಂದು 45 ಕೋಟಿ ರೂ. ಸಂಗ್ರಹ ಮಾಡಲಾಗುತ್ತಿದೆ. ಹೀಗಿದ್ದರೂ ವಾರ್ಷಿಕವಾಗಿ ಒಂದು ವಾರ್ಡ್‌ನಲ್ಲಿ ಕಸ ವಿಲೇವಾರಿಗೆಂದೇ 6 ಕೋಟಿ ರೂ. ವೆಚ್ಚ ಮಾಡುತ್ತಿದೆ. ಅಂದರೆ ಕಸದ ವಿಲೇವಾರಿಗಾಗಿಯೇ ವಾರ್ಷಿಕ 1200 ಕೋಟಿ ರೂ. ವೆಚ್ಚವಾಗುತ್ತಿದೆ. ಕಸದ ಶುಲ್ಕ ವಸೂಲಿಗೆ ಬಿಬಿಎಂಪಿ ಮುಂದಾಗಿರುವ ಕ್ರಮವನ್ನು ವಿರೋಧಿಸಿ ಆಮ್ ಆದ್ಮಿ ಪಕ್ಷ ಡಿ.2ರಂದು ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ನಡೆಸಲು ಮುಂದಾಗಿದೆ.

ಸಂಯುಕ್ತ ಕರ್ನಾಟಕ

| Date | 29-11-2020 |
|---|---|
| Page No | 2 |

# ಡಿ. 12ರಿಂದ ಸಕಾಲ ಸಪ್ತಾಹ ಆಚರಣೆ

**ಸಂ.ಕ. ಸಮಾಚಾರ ಬೆಂಗಳೂರು**

ಕಾಲಮಿತಿಯಲ್ಲಿ ಸರ್ಕಾರಿ ಸೇವೆಗಳನ್ನು ಒದಗಿಸುವ ಉದ್ದೇಶದಿಂದ ಜಾರಿಗೆ ತರಲಾಗಿರುವ ಸಕಾಲ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ವಿವಿಧ ಇಲಾಖೆಗಳಲ್ಲಿ ಡಿ. 12ರಿಂದ ಸಕಾಲ ಸಪ್ತಾಹ ಆಚರಿಸಲು ಉದ್ದೇಶಿಸಲಾಗಿದೆ.

ಡಿಸೆಂಬರ್ 12ರಿಂದ ಡಿ.19ರವರೆಗೆ ಸಕಾಲ ಸಪ್ತಾಹವನ್ನಾಗಿ ಆಚರಿಸಲು ಸರ್ಕಾರ ಆದೇಶಿಸಿದ್ದು, ಅದರಂತೆ ಕೃಷಿ ಇಲಾಖೆ, ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆ, ವಸತಿ ಇಲಾಖೆ, ಯುವ ಸಬಲೀಕರಣ, ಕ್ರೀಡಾ ಇಲಾಖೆ, ಜಲ ಸಂಪನ್ಮೂಲ ಇಲಾಖೆ, ಲೋಕೋಪಯೋಗಿ ಇಲಾಖೆ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಣ್ಣ ನೀರಾವರಿ, ಆರೋಗ್ಯ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಸಹಕಾರ ಇಲಾಖೆ, ಕೌಶಲಾಭಿವೃದ್ಧಿ ಇಲಾಖೆ, ಆರ್ಥಿಕ ಇಲಾಖೆ, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ, ಉನ್ನತ ಶಿಕ್ಷಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಾರ್ತಾ ಇಲಾಖೆ, ಕಾರ್ಮಿಕ ಇಲಾಖೆ, ಅರಣ್ಯ ಇಲಾಖೆ, ಇಂಧನ, ಕಾನೂನು ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಪಶುಸಂಗೋಪನೆ ಹಾಗೂ ಮೀನುಗಾರಿಕೆ ಇಲಾಖೆಗಳು ಸೇರಿ 30 ಇಲಾಖೆಗಳಲ್ಲಿ ಸಕಾಲ ಸಪ್ತಾಹ ಆಚರಿಸಲು ಸೂಚಿಸಲಾಗಿದೆ.

ಸಕಾಲ ಸಪ್ತಾಹ ವೇಳೆ ಹೊಸದಾಗಿ ಸ್ವೀಕರಿಸುವ ಅರ್ಜಿಗಳನ್ನು ಸಕಾಲ ಯೋಜನೆಯಡಿ ಸ್ವೀಕರಿಸಿ ನಿಗದಿತ ಕಾಲಮಿತಿಯಲ್ಲಿ ವಿಲೇವಾರಿ ಮಾಡಬೇಕು. ಸಕಾಲದಡಿ ಸ್ವೀಕರಿಸಿ ಬಾಕಿ ಉಳಿದಿರುವ ಅರ್ಜಿಗಳನ್ನು ವಿಲೇವಾರಿ ಮಾಡಬೇಕು. ಸಾರ್ವಜನಿಕರಲ್ಲಿ ಸಕಾಲ ಕುರಿತು ಅರಿವು ಮೂಡಿಸಬೇಕು ಎಂದು ಸೂಚಿಸಲಾಗಿದೆ. ಇನ್ನು ಸಕಾಲ ಸಪ್ತಾಹ ಆಚರಣೆ ಬಗ್ಗೆ ಸಕಾಲ ಮಿಷನ್ ತಂಡ ಕಚೇರಿಗಳಿಗೆ ಭೇಟಿ ನೀಡಿ ತಪಾಸಣೆ ನಡೆಸಲಿದೆ.

ಸಂಯುಕ್ತ ಕರ್ನಾಟಕ

| Date | 29-11-2020 |
| --- | --- |
| Page No | 2 |

# 719 ಮಂದಿಗೆ ಕೊರೊನಾ

**ಬೆಂಗಳೂರು:** ರಾಜಧಾನಿ ಬೆಂಗಳೂರಿನಲ್ಲಿ ಕಳೆದ 24 ಗಂಟೆಗಳಲ್ಲಿ 719 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದ್ದು ಒಟ್ಟು ಸೋಂಕಿತರ ಸಂಖ್ಯೆ 3,68,604ಕ್ಕೆ ಏರಿಕೆಯಾಗಿದೆ. ಶನಿವಾರ 7 ಸೋಂಕಿತರು ಸಾವನ್ನಪ್ಪಿದ್ದು ಇದುವರೆಗೆ 4121 ಮಂದಿ ಸಾವನ್ನಪ್ಪಿದ್ದಾರೆ. 3,46,116 ಮಂದಿ ಗುಣಮುಖರಾಗಿ ಬಿಡುಗಡೆಯಾಗಿದ್ದು, 18,366 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ರಾಜ್ಯದಲ್ಲಿ ಶನಿವಾರ 1522 ಜನರಿಗೆ ಸೋಂಕು ತಗುಲಿದ್ದು ಇದರೊಂದಿಗೆ ಒಟ್ಟು ಸೋಂಕಿತರ ಸಂಖ್ಯೆ 8,82,608 ಕ್ಕೆ ಏರಿಕೆಯಾಗಿದೆ. ಶನಿವಾರ ರಾಜ್ಯದಲ್ಲಿ 12 ಮಂದಿ ಸೋಂಕಿತರು ಸಾವನ್ನಪ್ಪಿದ್ದು, ಇದುವರೆಗೆ 11,750 ಮಂದಿ ಮೃತಪಟ್ಟಿದ್ದಾರೆ ಹಾಗೂ 8,46,082 ಜನ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆ ತಿಳಿಸಿದೆ.